# ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ

ಬಸವ ಭವನ, ಬಸವೇಶ್ವರ ವೃತ್ತ, ಹೈಗ್ರೌಂಡ್ಸ್, ಬೆಂಗಳೂರು-560001.
ದೂರವಾಣಿ:080-22355065 ಇಮೇಲ್: karscdrc@kar.nic.in

ಸಂಖ್ಯೆ:ಕರಾಆ:ಆಡಳಿತ:11/2003-04(ಭಾಗ-2) ದಿ: 16-04-2021

## ಸುತ್ತೋಲೆ

ವಿಷಯ: ರಾಜ್ಯ ಆಯೋಗ ಮತ್ತು ಜಿಲ್ಲಾ ಆಯೋಗಗಳಲ್ಲಿ ಪ್ರಕರಣಗಳ ವಿಚಾರಣೆಯನ್ನು ವಿಡಿಯೋ ಕಾನ್ಫರೆನ್ಸ ಮೂಲಕ ನಡೆಸುವ ಬಗ್ಗೆ.

---

ಕರ್ನಾಟಕ ರಾಜ್ಯಾದ್ಯಂತ ಕೋವಿಡ್-19 ಸಾಂಕ್ರಾಮಿಕ ರೋಗ ಹರಡುತ್ತಿರುವ ಹಿನ್ನಲೆಯಲ್ಲಿ ಪ್ರಕರಣಗಳ ವಿಚಾರಣೆ ದಿನಗಳಂದು ಪಕ್ಷಗಾರರು ಹಾಗೂ ವಕೀಲರು ಹಾಜರಾಗಲು ತೊಂದರೆಯಾಗುತ್ತಿರುವ ಕಾರಣ ಪಕ್ಷಗಾರರು ಹಾಗೂ ವಕೀಲರು ರಾಜ್ಯ ಆಯೋಗ ಮತ್ತು ಜಿಲ್ಲಾ ಆಯೋಗಗಳಲ್ಲಿ ಪ್ರಕರಣಗಳ ವಿಡಿಯೋ ಕಾನ್ಫರೆನ್ಸ ಮೂಲಕ ವಿಚಾರಣೆಗೆ ಹಾಜರಾಗಲು ಮನವಿ ಸಲ್ಲಿಸಿದ್ದಲ್ಲಿ, ಆ ಬಗ್ಗೆ ನ್ಯಾಯಾಲಯ ಸಭಾಂಗಣದಲ್ಲಿ ಸೂಕ್ತ ಗಣಕ ಯಂತ್ರದ ಮೂಲಕ ಅವಶ್ಯಕ ಲಿಂಕ್ ವ್ಯವಸ್ಥೆಯನ್ನು ಅಳವಡಿಸಿಕೊಂಡು, ಅಂತಹ ಮನವಿಗಳನ್ನು ಸಲ್ಲಿಸುವಂತ ಪಕ್ಷಗಾರರು ಹಾಗೂ ವಕೀಲರಿಗೆ ವಿಡಿಯೋ ಕಾನ್ಫರೆನ್ಸ ಮೂಲಕ ವಿಚಾರಣೆಗೆ ಹಾಜರಾಗಲು ಅನುಮತಿಸಿ ಪ್ರಕರಣಗಳ ವಿಚಾರಣೆಯನ್ನು ನಡೆಸುವುದು. ಉಳಿದಂತೆ, ಪಕ್ಷಗಾರರ ಹಾಜರಾತಿ ಅನಿವಾರ್ಯವಿದ್ದಲ್ಲಿ ಅವಕಾಶ ಕಲ್ಪಿಸಿ ಎಂದಿನಂತೆ ಕೋವಿಡ್-19 ಮಾರ್ಗಸೂಚಿಗಳನ್ನು ಅನುಸರಿಸಿಕೊಂಡು ಕಲಾಪಗಳನ್ನು ನಡೆಸುವಂತೆ ತಿಳಿಸಿದೆ.

ಮಾನ್ಯ ಅಧ್ಯಕ್ಷರ ಆದೇಶದಾನುಸಾರ,

16/4/21
(ಎನ್.ರಾಜು)
ರಿಜಿಸ್ಟ್ರಾರ್ ಮತ್ತು ಆಡಳಿತಾಧಿಕಾರಿ,
ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ
ಆಯೋಗ, ಬೆಂಗಳೂರು 16/4/21

<u>ಪ್ರತಿಯನ್ನು ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಈ ಕೆಳಕಂಡವರಿಗೆ ಕಳುಹಿಸಿದೆ:</u>

1) ಮಾನ್ಯ ನ್ಯಾಯಾಂಗ ಸದಸ್ಯರು ಮತ್ತು ಮಹಿಳಾ ಸದಸ್ಯರು, ರಾಜ್ಯ ಆಯೋಗ.
2) ಅಧ್ಯಕ್ಷರು, ಮತ್ತು ಸದಸ್ಯರು/ಮಹಿಳಾ ಸದಸ್ಯರು ಎಲ್ಲಾ ಜಿಲ್ಲಾ ಆಯೋಗಗಳು.
3) ಸಹಾಯಕ ರಿಜಿಸ್ಟ್ರಾರ್ ಮತ್ತು ಸಹಾಯಕ ಆಡಳಿತಾಧಿಕಾರಿ, ಎಲ್ಲಾ ಜಿಲ್ಲಾ ಆಯೋಗಗಳು.
4) ಟಿ.ಎಸ್.ಪಿ, ರಾಜ್ಯ ಆಯೋಗ, ಜಾಲತಾಣದಲ್ಲಿ ಪ್ರಕಟಿಸುವ ಬಗ್ಗೆ.
5) ರಾಜ್ಯ ಆಯೋಗದ ಸೂಚನಾ ಫಲಕ.
6) ಕಚೇರಿ ಪ್ರತಿ.